

# ಹಲ್ಲಿ ರಾಜ



ನಮಗೆಲ್ಲಾ ಗೋಡೆ ಮೇಲೆ ಓಡಾಡುವ ಹಲ್ಲಿಯನ್ನು ನೋಡಿದರೆ ಏನೋ ಒಂದು ತರಹ ಅಸಹ್ಯ. ಆದರೆ ರಾಜಸ್ಥಾನದ ಬಿಕಾನೇರ್‌ನಲ್ಲಿರುವ 21ರ ಹರೆಯದ ನವರತನ್ ಹರ್ಷ್‌ಗೆ ಹಲ್ಲಿ ಎಂದರೆ ಭಾರೀ ಇಷ್ಟ! ತನ್ನೂರಿನಲ್ಲಿ ಯಾರ ಮನೆಯ ಗೋಡೆಯಲ್ಲೇ ಆಗಲಿ, ಹರಿದಾಡುತ್ತಿರುವ ಹಲ್ಲಿಗಳು ಕಣ್ಣಿಗೆ ಬಿದ್ದರೆ ಸಾಕು, ಈತ ತಕ್ಷಣ ಕೈಯಲ್ಲಿ ಹಿಡಿದುಕೊಂಡು ಅವುಗಳೊಂದಿಗೆ ಆಟವಾಡುತ್ತಾನೆ! ಈತನಿಗೆ ಹಲ್ಲಿಗಳ ಮೇಲೆ ಅದೆಷ್ಟು ಪ್ರೀತಿಯೆಂದರೆ ಅವುಗಳನ್ನು ಮೈ ಮೇಲೆ, ಕೈಯಲ್ಲಿ, ಮುಖದ ಮೇಲೆ, ಅಷ್ಟೇಕೆ ಬಾಯಿಯ ಒಳಗಡೆಯೂ ಸಹ ಇಟ್ಟುಕೊಂಡು ಸಂತಸ ಪಡುತ್ತಾನೆ.

ನವರತನ್ ಚಿಕ್ಕ ಹುಡುಗನಿದ್ದಾಗ ಶಾಲೆಯಲ್ಲಿ ಕುಳಿತಿರುವಾಗ ಗೋಡೆಯ ಮೇಲಿನ ಹಲ್ಲಿಯೊಂದು ಧೊಪ್ಪೆಂದು ಈತನ ತೊಡೆಯ ಮೇಲೆ ಬಿತ್ತಂತೆ. ಅಂದಿನಿಂದಲೂ ಇವನಿಗೆ ಹಲ್ಲಿಗಳೇ ಕ್ಲೋಸ್ ಫ್ರೆಂಡ್ಸ್! ಈತನ ವಾರಗೆಯಯರೆಲ್ಲಾ ಪಾರ್ಟಿ, ಮೋಜು, ಮಸ್ತಿಗಳಲ್ಲಿ ಸಂತೋಷ ಪಡುತ್ತಿದ್ದರೆ ಈತ ಮಾತ್ರ ಹಲ್ಲಿಗಳೊಂದಿಗೆ ಸರಸವಾಡುತ್ತಾನೆ. ಅವುಗಳಿಗೆ ಈತ ಏನೇನೋ ತರಬೇತಿ ಕೂಡ ನೀಡುತ್ತಾನಂತೆ! ಬಳಿಕ ಅವುಗಳನ್ನು 'ಫ್ರೀ'ಯಾಗಿ ಬಿಡುತ್ತಾನೆ.

'ಏನಪ್ಪಾ ಹೀಗೆ ಮಾಡುವಾಗ ಜಿಗುಪ್ಸೆಯಾಗಲೀ, ಹೆದರಿಕೆಯಾಗಲೀ ಆಗುವುದಿಲ್ಲವೆ?' ಎಂದು ಪ್ರಶ್ನಿಸಿದರೆ ಈತ ಸುಮ್ಮನೆ ನಗುತ್ತಾನೆ. ಹಳ್ಳಿಯ ಜನರಿಗೆಲ್ಲಾ ಇದೊಂದು ಅಚ್ಚರಿಯ ವಿದ್ಯಮಾನವೇ. ಹಲ್ಲಿ ಕಚ್ಚಿದರೂ ಕೂಡಾ ಈತನಿಗೆ ಏನೂ ಆಗಲ್ಲವಂತೆ. ಜನ ಈತನನ್ನು 'ಹಲ್ಲಿ ರಾಜ' ಎಂದೇ ಕರೆಯುತ್ತಿದ್ದಾರೆ!

■ ವಿದ್ಯಾ ವಿ ಹಾಲಭಾವಿ